# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ, ವಾರ್ಡ್ ಮಟ್ಟದ ವಿಕೇಂದ್ರಿಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ಪ್ರತಿಕ್ರಿಯೆ ಸಮಿತಿ (WDC)**

**ಸ.ಕಾ.ನಿ.ಅ (ಬೇಗೂರು) ಉಪ ವಿಭಾಗ ಕಛೇರಿ, ಬೇಗೂರು, ಬೊಮ್ಮನಹಳ್ಳಿ ವಲಯ, ಬೆಂಗಳೂರು–5600114**

ಸಂಖ್ಯೆ: ವಾರ್ಡ್192/WDC/PR/18/2021-22 ದಿನಾಂಕ:11/05/2021

* * * * *

## ವಾರ್ಡ್–192 ಬೇಗೂರು ವಾರ್ಡ್ DETER ಸಮಿತಿಯ ಸಭಾ ನಡವಳಿಗಳು

- ಮಾನ್ಯ ಮುಖ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ: ಬಿ12(ಕೋ–19)04/2021–22 ರ ಆದೇಶದಂತೆ ವಾರ್ಡ್–192 ಬೇಗೂರು ವಾರ್ಡ್ ಮಟ್ಟದ DETER ಸಮಿತಿಯ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:11/05/2021 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೇಗೂರು) ಉಪ ವಿಭಾಗ ಕಛೇರಿಯಲ್ಲಿ ಸಭೆಯನ್ನು ನಡೆಸಲಾಯಿತು.

- ಸದರಿ ಸಭೆಗೆ ಈ ಕೆಳಕಂಡ ಅಧಿಕಾರಿ/ನೌಕರರುಗಳು ಹಾಜರಾಗಿದ್ದರು.

| ಕ್ರ.ಸಂ | ಅಧಿಕಾರಿ/ನೌಕರರುಗಳು, ಸ್ವಯಂ ಸೇವಕರು ಮತ್ತು RWAs ರವರುಗಳ ಹೆಸರು ಶ್ರೀಯುತರುಗಳು | WDC ಸಮಿತಿಯ ಹುದ್ದೆ | ದೂರವಾಣಿ ಸಂಖ್ಯೆ |
|---|---|---|---|
| 1. | K P Neelakantaiah | Nodal Officer | 9845989978 |
| 2. | Santhosh kumar H B, ARO Beguru | Member | 7259653938 |
| 3. | Balaji, AEE SWD Bommanahalli | Member | 8892124229 |
| 4. | Dr.Latha, MO PHC Begur | Member | 9845658900 |
| 5. | Dr.Ramanna, Covid Doctor, PHC Begur | Member | 9972033184 |
| 6. | Cheluvaraju, AE Begur | Secretary | 9620687103 |
| 7. | Thimmaiah, Assessor Begur | Member | 9008792317 |
| 8. | Siddappa G, Assessor Begur | Member | 9449051187 |
| 9. | Janardhan, Revenue inspector Begur | Member | 9980192453 |
| 10. | Sridhar, SHI Begur | Member | 9739453414 |
| 11. | Chandranna, PT Govt High School Begur | Member | 9980341906 |
| 12. | Ramesh | Member | 9035515888 |
| 13. | SOWBHAGYA .P | Volunteer | 6362246277 |
| 14. | MADHURA C S | Volunteer | 9538206605 |
| 15. | ASHA . A | Volunteer | 8197266329 |
| 16. | ABHILASH B | Volunteer | 7619659558 |
| 17. | Yashwanth | Volunteer | 7760119803 |
| 18. | PRESIDENT/REPRASENTATIVE | RWAs | |

ಮು.ತಿ.ನೋ.....2

Scanned by CamScanner

- ವಾರ್ಡ್ ಮಟ್ಟದ W-DETER ಸಮಿತಿಯ ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಎಲ್ಲಾ ಸದಸ್ಯರುಗಳನ್ನು, ಎಲ್ಲಾ ಅಧಿಕಾರಿ/ನೌಕರರುಗಳನ್ನು, ಸ್ವಯಂ ಸೇವಕರುಗಳನ್ನು ಮತ್ತು ರೆಸಿಡೆನ್ಸ್ ವೆಲ್ಫೇರ್ ಅಸೋಷಿಯೇಷನ್ ರವರುಗಳನ್ನು ಸ್ವಾಗತಿಸಿದರು.

- ಸದರಿ ಸಭೆಯಲ್ಲಿ W-DETER ಸಮಿತಿಯ ರಚನೆ ಹಾಗೂ ಉದ್ದೇಶದ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 158 ಟಿಎನ್‌ಆರ್ 2020(1) ದಿ:07-05-2021 ಆದೇಶವನ್ನು ವಿಶ್ಲೇಷಣೆ ಮಾಡಲಾಯಿತು.

- ಸದರಿ W-DETER ಸಮಿತಿಯಲ್ಲಿ

  ನೋಡಲ್ ಅಧಿಕಾರಿ-ಅಧ್ಯಕ್ಷರು

  ವಾರ್ಡ್‌ನ ಸಹಾಯಕ ಅಭಿಯಂತರರು-ಸದಸ್ಯ ಕಾರ್ಯದರ್ಶಿ

  ವಾರ್ಡ್‌ಗೆ ಸಂಬಂಧಿಸಿದ ಪಾಲಿಕೆಯ ಎಲ್ಲಾ ಅಧಿಕಾರಿಗಳು-ಸದಸ್ಯರು

  ವಾರ್ಡ್‌ಗೆ ಸಂಬಂಧಿಸಿದ ಇತರೆ ಎಲ್ಲಾ ಅಧಿಕಾರಿಗಳು-ಸದಸ್ಯರು

  ವಾರ್ಡ್‌ನಲ್ಲಿನ ಸಾಮಾಜಿಕ ಕಲ್ಯಾಣ ಅಸೋಷಿಯೇಷನ್‌ಗಳು-ಸದಸ್ಯರು

  ಸ್ವಯಂ ಸೇವಕರು-ಸದಸ್ಯರುಗಳು

  ಆಗಿದ್ದು ಅದರಂತೆ ಸಮಿತಿಯನ್ನು ರಚಿಸಲು ಆದೇಶಲಾಗಿದ್ದು, ಅದರಂತೆ ಈ ಕಛೇರಿ ಆದೇಶ ಸಂಖ್ಯೆ: ಬಿ.ಬಿ.ಎಂ.ಪಿ.ವಾ.ಕ.192(ಬೇ)ಪಿಆರ್/18/2021-22 ದಿನಾಂಕ: 11-05-2021 ರಂತೆ ಸಮಿತಿ ರಚಿಸಲಾಗಿದೆ ಎಂದು ತಿಳಿಸಲಾಯಿತು.

- ಮಾನ್ಯ ಸರ್ಕಾರದ ಆದೇಶದಂತೆ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತ ರೋಗಿಗಳಿಗೆ ಅಗತ್ಯ ಚಿಕಿತ್ಸೆ ದೊರಕಿಸಿಕೊಡುವ ನಿಟ್ಟಿನಲ್ಲಿ Triage Centre ಅನ್ನು ತೆರೆಯಬೇಕಾಗಿದ್ದು, ಸದರಿ ಸ್ಥಳವನ್ನು ಗುರುತಿಸಲು ವೈದ್ಯಾಧಿಕಾರಿ, ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ರವರಿಗೆ ಸೂಚಿಸಲಾಯಿತು ಹಾಗೂ ವಾರ್ಡ್ ಮಟ್ಟದಲ್ಲಿ Covid Care Centre ಅನ್ನು ತೆರೆಯಲು ಸೂಕ್ತ ಸ್ಥಳ ಹುಡುಕಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೇಗೂರು) ಮತ್ತು ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ರವರಿಗೆ ಸೂಚಿಸಲಾಯಿತು.

- ಕಾರ್ಯದರ್ಶಿರವರು, ವೈದ್ಯಾಧಿಕಾರಿ ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ರವರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೇಗೂರು ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿರುವ ಹಳೆಯ ಹೆರಿಗೆ ಆಸ್ಪತ್ರೆಯ ಕಟ್ಟಡದಲ್ಲಿ Triage Centre ಅನ್ನು ತೆರೆಯಲು ಸಲಹೆ ನೀಡಿದರು.

Scanned by CamScanner

❖ ಹೋಮ್ ಐಸೋಲೇಶನ್ ನೋಡಲ್ ಅಧಿಕಾರಿ ರವರಿಗೆ ಸರ್ಕಾರದ ಆದೇಶದಂತೆ ಹೋಮ್ ಐಸೋಲೇಶನ್ ತಂಡದವರಿಗೆ ಪ್ರತಿ ದಿನ ಸಂಬಂದಪಟ್ಟ ಹೋಮ್ ಐಸೋಲೇಶನ್ ರೋಗಿಗಳಿಗೆ ಅಗತ್ಯ ಚಿಕಿತ್ಸೆ ಹಾಗೂ ಔಷಧಿಗಳನ್ನು ನೀಡುವ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು Tele Triage ಅನ್ನು ಸಹ ಮಾಡಲು ಸೂಚಿಸಲಾಯಿತು.

❖ ಪ್ರತಿ ದಿನ ಬರುವ ಕೋವಿಡ್-19 ರೋಗಿಗಳ ವಿವರಗಳನ್ನು ಪಡೆದು ಅವರುಗಳ ಪ್ರೈಮರಿ ಮತ್ತು ಸೆಕೆಂಡರಿ ಸಂಪರ್ಕರವರುಗಳ ಪಟ್ಟಿಯನ್ನು ಮಾಡಲು ಹಾಗೂ ಪ್ರೈಮರಿ ಮತ್ತು ಸೆಕೆಂಡರಿ ಸಂಪರ್ಕರವರುಗಳ ಸಂಖ್ಯೆಯನ್ನು ಹೆಚ್ಚು ಹೆಚ್ಚು ಮಾಡಲು ಮತ್ತು ಸದರಿ ಪಟ್ಟಿಯನ್ನು Testing ಮಾಡಿಸಲು ವೈದ್ಯಾಧಿಕಾರಿ, ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ರವರಿಗೆ ತಪ್ಪದೆ ನೀಡಲು Contact Tracing ನೋಡಲ್ ಅಧಿಕಾರಿ ರವರಿಗೆ ಮತ್ತು ಬಿ.ಎಲ್.ಓ ರವರುಗಳಿಗೆ ಸೂಚಿಸಲಾಯಿತು.

❖ ಸಭೆಗೆ ಹಾಜರಿದ್ದ ಪಾಲಿಕೆಯ ಕಂದಾಯ ಸಿಬ್ಬಂದಿಗಳಿಗೆ ಅವರುಗಳ ಅಧೀನದಲ್ಲಿ ಬರುವ ಪ್ರದೇಶಗಳಲ್ಲಿ ಕೋವಿಡ್-19 Positive case ಬಂದಲ್ಲಿ ಅವರುಗಳ ಪ್ರೈಮರಿ ಮತ್ತು ಸೆಕೆಂಡರಿ ಸಂಪರ್ಕರವರುಗಳ ಮಾಹಿತಿ ಪಡೆಯಲು ಅನುಕೂಲವಾಗುವಂತೆ ಬಿ.ಎಲ್.ಓ ರವರಿಗಳಿಗೆ ಸಹಾಯ ಮಾಡಲು ಸೂಚಿಸಲಾಯಿತು.

❖ ಸಭೆಯಲ್ಲಿ ಹಾಜರಿದ್ದ ಸ್ವಯಂ ಸೇವಕರುಗಳಿಗೆ ಅವರ ಜವಾಬ್ದಾರಿಗಳನ್ನು ನಿರ್ವಹಿಸುವ ಕುರಿತು ಮಾರ್ಗದರ್ಶನ ನೀಡಲಾಯಿತು. ಸ್ವಯಂ ಸೇವಕರುಗಳು ವಾರ್ಡ್-192 ಬೇಗೂರು ವ್ಯಾಪ್ತಿಯಲ್ಲಿ ಕೋವಿಡ್-19ಗೆ ಸಂಬಂಧಿಸಿದ ಯಾವುದೇ ವಿಷಯಗಳು, ತೊಂದರೆಗಳು/ಸಮಸ್ಯೆಗಳು ಕಂಡುಬಂದಲ್ಲಿ ಕೊಡಲೇ ವಾರ್ಡ್ ಮಟ್ಟದ DETER ಸಮಿತಿಯ ಗಮನಕ್ಕೆ ತಂದು ಪರಿಹಾರ ನೀಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು. ಸದರಿ ಸ್ವಯಂ ಸೇವಕರುಗಳು ಕೋವಿಡ್-19ಗೆ ಸಂಬಂಧಿಸಿದ ಯಾವುದೇ ಕೆಲಸಗಳನ್ನು ಅಚ್ಚು ಕಟ್ಟಾಗಿ ನಿರ್ವಹಿಸಲಾಗುವುದೆಂದು ಒಪ್ಪಿಗೆ ನೀಡಿದರು

❖ ಸಭೆಯಲ್ಲಿ ಹಾಜರಿದ್ದ ರೆಸಿಡೆನ್ಸ್ ವೆಲ್ಫೇರ್ ಅಶೋಷಿಯೇಷನ್ ರವರುಗಳಿಗೆ ಅವರುಗಳ ಅಪಾರ್ಟ್‌ಮೆಂಟ್‌ಗಳಲ್ಲಿ ಕೋವಿಡ್-19 ನಿರ್ವಹಣೆಯನ್ನು ಯಾವ ರೀತಿ ನಿರ್ವಹಿಸಬೇಕು ಎಂದು ಮಾರ್ಗದರ್ಶನ ನೀಡಲಾಯಿತು ಹಾಗೂ ಯಾವುದೇ ಕೋವಿಡ್-19 ಗೆ ಸಂಬಂದಿಸಿದ ವಿಷಯಗಳಿದ್ದಲ್ಲಿ ಅದನ್ನು ಅಧ್ಯಕ್ಷರು ರವರ ಗಮನಕ್ಕೆ ತರಲು ತಿಳಿಸಲಾಯಿತು.

❖ ಒಟ್ಟಿನಲ್ಲಿ ಸ್ವಯಂ ಸೇವಕರು ಹಾಗೂ ರೆಸಿಡೆನ್ಸ್ ವೆಲ್ಫೇರ್ ಅಶೋಷಿಯೇಷನ್ ರವರು ಸಾರ್ವಜನಿಕರು ಹಾಗೂ ಸರ್ಕಾರದ ಮಧ್ಯೆ ಸೇತುವೆಯಾಗಿ ಕಾರ್ಯ ನಿರ್ವಹಿಸಲು ಸೂಚಿಸಲಾಯಿತು.

❖ ವಾರ್ಡ್-192 ಬೇಗೂರು ವಾರ್ಡ್‌ಗೆ ಸಂಬಂದಿಸಿದಂತೆ WARD-DETER COMMITTEE ಎಂದು ಒಂದು Whatsapp ಗ್ರೂಪ್ ರಚಿಸಲು ಸೂಚಿಸಲಾಯಿತು.

Scanned by CamScanner

- ❖ ಸದರಿ ಸಭೆಯನ್ನು ಪ್ರತಿ 3 ದಿನಗಳಿಗೊಮ್ಮೆ ನಡೆಸಲು ತಿರ್ಮಾನಿಸಲಾಯಿತು.

- ❖ ಪ್ರತಿ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರುಗಳಿಗೆ ತಲುಪುವಂತೆ ಮಾಡಲು ಕಾರ್ಯದರ್ಶಿ ರವರಿಗೆ ಸೂಚಿಸಲಾಯಿತು.

- ❖ ಈಗಾಗಲೇ ವಾರ್ಡ್ ಮಟ್ಟದಲ್ಲಿ ತೆರೆದಿರುವ ವಾರ್ಡ್ ವಾರ್ ರೂಮ್ ಅನ್ನು ಬಲಪಡಿಸಲು ಸಿಬ್ಬಂದಿಗಳನ್ನು ಪಾಳಿಯ ಆಧಾರ ನಿಯೋಜಿಸುವಂತೆ ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ರವರಿಗೆ ತಿಳಿಸಲಾಯಿತು.

- ❖ ಎಲ್ಲಾ ಸದಸ್ಯರುಗಳು ತಮಗೆ ವಹಿಸಿರುವ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಿ ಕೋವಿಡ್–19 ಸಾಂಕ್ರಮಿಕ ರೋಗವನ್ನು ನಿಯಂತ್ರಿಸಲು ಕ್ರಮ ವಹಿಸಬೇಕೆಂದು ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನೋಡಲ್ ಅಧಿಕಾರಿಯವರ ಆದೇಶದ ಮೇರೆಗೆ)

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್–192 W-DETER ಸಮಿತಿ ಬೇಗೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:–

1. ಮಾನ್ಯ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಉಪ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಕಂದಾಯ ಅಧಿಕಾರಿಗಳು (ಅಂಜನಾಪುರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ
4. ಮಾನ್ಯ ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ದಕ್ಷಿಣ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಆರೋಗ್ಯಾಧಿಕಾರಿ, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ನೋಡಲ್ ಅಧಿಕಾರಿಗಳು, ವಾರ್ಡ್–192 W-DETER ಸಮಿತಿ, ಬೇಗೂರು ರವರಿಗೆ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೇಗೂರು) ರವರಿಗೆ ಕಳುಹಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ರವರಿಗೆ ಕಳುಹಿಸಿದೆ.
9. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಬೇಗೂರು ರವರಿಗೆ ಕಳುಹಿಸಿದೆ.
10. ಕೋವಿಡ್ ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ ಬೇಗೂರು ರವರಿಗೆ ಕಳುಹಿಸಿದೆ.
11. ನೋಡಲ್ ಅಧಿಕಾರಿಗಳು, ಹೋಮ್ ಐಸೋಲೇಶನ್ ಬೇಗೂರು ರವರಿಗೆ ಕಳುಹಿಸಿದೆ.
12. ನೋಡಲ್ ಅಧಿಕಾರಿಗಳು, ಕಾಂಟ್ಯಾಕ್ಟ್ ಟ್ರೇಸಿಂಗ್ ಬೇಗೂರು ರವರಿಗೆ ಕಳುಹಿಸಿದೆ.
13. ಎಲ್ಲಾ ಮಾಲ್ಯಮಾಪಕರು/ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರುಗಳು ಬೇಗೂರು ರವರಿಗೆ ಕಳುಹಿಸಿದೆ.
14. ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು, ಬೇಗೂರು ರವರಿಗೆ ಕಳುಹಿಸಿದೆ.
15. ವಾರ್ಡ್–192 W-DETER ಸಮಿತಿಯ ಎಲ್ಲಾ ಸದಸ್ಯರುಗಳಿಗೆ, ಸ್ವಯಂ ಸೇವಕರುಗಳಿಗೆ ಮತ್ತು ರೆಸಿಡೆನ್ಸ್ ವೆಲ್ಫೇರ್ ಅಶೋಷಿಯೇಷನ್ ರವರಿಗೆ ಕಳುಹಿಸಿದೆ.

Scanned by CamScanner